ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 26-03-2021 ಪ್ರಶ್ನೆ ಸಂಖ್ಯೆ : 1924(2216)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 26-03-2021

ಉತ್ತರಿಸುವ ಸಚಿವರು: ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

ವಿಷಯ : ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಗೆ ಪ್ರತ್ಯೇಕ ವಿ.ವಿ. ಸ್ಥಾಪಿಸುವ ಬಗ್ಗೆ

(ಅ) ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು, ವಿಕಲಚೇತನ ಶ್ರೇಯೋಭಿವೃದ್ಧಿಗಾಗಿ ವಿಕಲಚೇತನ ಕಾಯ್ದೆ 2016ನ್ನು ಜಾರಿಗೊಳಿಸಿದ್ದು, ಈ ನಿಯಮಗಳ ಪ್ರಕಾರ ವಿಕಲಚೇತನರಿಗೆ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಸಾಮಾನ್ಯ ವಿದ್ಯಾರ್ಥಿಗಳೊಂದಿಗೆ ಸಮಾನ ಅವಕಾಶ ಶಿಕ್ಷಣ ಮುಂದುವರಿಸುತ್ತಿದ್ದರೂ ಸಹ ಇತ್ತೀಚೆಗೆ ಸರ್ಕಾರವು ಶಿಕ್ಷಣ ತಜ್ಞರ ಸಲಹಾ ಸಮಿತಿ ರಚಿಸಲಾಗಿದೆಯೇ;

(ಆ) ಶಿಕ್ಷಣ ತಜ್ಞರ ಸಲಹಾ ಸಮಿತಿಯ ಕಾರ್ಯವ್ಯಾಪ್ತಿಗಳೇನು; ಸಮಿತಿಯು ವಿಕಲಚೇತನರ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸಲು ಶಿಫಾರಸ್ಸು ಮಾಡಿದೆಯೇ; ವಿಕಲಚೇತನರಿಗೆ ಪ್ರತ್ಯೇಕ ವಿ.ವಿ. ಸ್ಥಾಪನೆಯಿಂದ ಅವರ ಹಕ್ಕುಗಳ ಚ್ಯುತಿಗೆ ಭದ್ರತೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ವಿಕಲಚೇತನರ ವಿ.ವಿ.ಗೆ ನಿಯಮಬಾಹಿರವಾಗಿ ವಿಕಲಚೇತನರ ಸಂಘ-ಸಂಸ್ಥೆ ಪ್ರತಿನಿಧಿಗಳ ಸಲಹೆ ಪಡೆಯದೇ ತಜ್ಞರ ಸಮಿತಿಯು ಸರ್ಕಾರಕ್ಕೆ ಪ್ರತ್ಯೇಕ ವಿ.ವಿ.ಗೆ ಶಿಫಾರಸ್ಸು ಮಾಡಿದೆಯೇ; (ವಿವರಗಳನ್ನು ಒದಗಿಸುವುದು)

(ಈ) ವಿಕಲಚೇತನರ ಪ್ರತ್ಯೇಕ ವಿ.ವಿ.ಗೆ ಶಿಫಾರಸ್ಸು ಮಾಡಿದ ತಜ್ಞರ ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರವು ಅಂಗೀಕರಿಸುವ ಮುನ್ನ ಸಂಘ-ಸಂಸ್ಥೆಗಳ ಪ್ರತಿನಿಧಿಗಳನ್ನು ಮತ್ತು ಕಾನೂನು ತಜ್ಞರ ಸಲಹೆಯನ್ನು ಪಡೆಯಲಾಗಿದೆಯೇ? (ವಿವರವಾದ ಮಾಹಿತಿಯನ್ನು ಒದಗಿಸುವುದು)